# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೂಡಲಗಿ.

ಸಿ.ಸಿ. ನಂಃ **430/2014**

ಸಿ.ಡಬ್ಲ್ಯೂ- 11
ಪಿ.ಡಬ್ಲ್ಯೂ- 9

**ದಿನಾಂಕಃ 01-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು | : ಶಾಂತವೀರ ಪರುಶೆಟ್ಟಿ |
| ತಂದೆಯ/ಗಂಡನ ಹೆಸರು | : ಶಿವಯೋಗೆಪ್ಪ |
| ವಯಸ್ಸು | : 62 ವರ್ಷ |
| ಉದ್ಯೋಗ | : ನಿವೃತ್ತ ಶಿಕ್ಷಕ |
| ವಾಸ ಸ್ಥಳ | : ಕೌಜಲಗಿ |
| ತಾಲೂಕು | : ಗೋಕಾಕ |

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ ರವರಿಂದ:-**

ನಾನು 1986 ರಿಂದ ಜನವರಿ 2024 ರವರೆಗೆ ಕೇಳಕರ ಪ್ರೌಢ ಶಾಲೆಯಲ್ಲಿ ಸಹಶಿಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಚಾಸಾ 1 ರವರು ಬಲಭೀಮ ವಿದ್ಯಾಪ್ರಸಾರಕ ಸಮಿತಿಯ ಉಪಾಧ್ಯಕ್ಷರು, ಚಾಸಾ 5 ರವರು ಬಲಭೀಮ ವಿದ್ಯಾಪ್ರಸಾರಕ ಸಮಿತಿಯ ಅಧ್ಯಕ್ಷರು ಆಗಿದ್ದರು. ಚಾಸಾ 6 ಸದರಿ ಸಂಘದ ಕಾರ್ಯದರ್ಶಿಯಾಗಿದ್ದು ಚಾಸಾ 7 ರಿಂದ 9 ರವರು ಸದರಿ ಸಂಘದ ಸದಸ್ಯರಾಗಿದ್ದರು. ಕೇಳಕರ ಪ್ರೌಢ ಶಾಲೆಯ auditing ಕೆಲಸವನ್ನು 1986 ರಿಂದಲೂ ಚಾಸಾ 10 ರವರು ಮಾಡುತ್ತಿದ್ದರು.

ಪ್ರಕರಣದ ಆರೋಪಿ ಕೇಳಕರ ಪ್ರೌಢ ಶಾಲೆಯಲ್ಲಿ 2003 ರಿಂದ 2008 ರವರೆಗೆ ಮುಖ್ಯ ಉಪಾಧ್ಯಾಯರಾಗಿ ಕೆಲಸ ಮಾಡಿರುತ್ತಾರೆ. 2003 ರಿಂದ 2008 ರವರೆಗೆ ಆರೋಪಿ ನಮ್ಮ ಶಾಲೆಯ ಮುಖ್ಯೋಪಾದ್ಯಾಯರಾಗಿ ಕೆಲಸ ಮಾಡುತ್ತಿದ್ದಾಗ ಆರೋಪಿ ಶಾಲೆಯ audit ನ್ನು ಸರಿಯಾಗಿ ಮಾಡಿಸಿರುವುದಿಲ್ಲ. ಈ ವಿಚಾರವಾಗಿ ಆಡಳಿತ ಮಂಡಳಿಯವರು ಆರೋಪಿಗೆ 2010 ರಲ್ಲಿ audit report ಬಂದ ನಂತರ ನೋಟೀಸ್ ನೀಡಿದ್ದು, ಸದರಿ ನೊಟೀಸಗೆ ಆರೋಪಿ ಯಾವುದೇ ಉತ್ತರ ನೀಡಿರುವುದಿಲ್ಲ. 2003 ರಿಂದ 2008 ರವರೆಗಿನ ಶಾಲೆಯ audit report ನ್ನು ಸಂಬಂಧಪಟ್ಟ ಸರಕಾರಿ ಅಧಿಕಾರಿಗಳಿಗೆ ಆರೋಪಿ ಸಲ್ಲಿಸಿರುವುದಿಲ್ಲ. ಈ ವಿಚಾರವಾಗಿ ಆರೋಪಿಯನ್ನು ಶಾಲಾ ಆಡಳಿತ ಮಂಡಳಿಯವರು 2008 ರಲ್ಲಿ ಅಮಾನತ್ತು ಮಾಡಿ ಇಲಾಖಾ ವಿಚಾರಣೆ ಕೈಗೊಂಡಿರುತ್ತಾರೆ.

ಆರೋಪಿಯನ್ನು ಅಮಾನತ್ತು ಮಾಡಿದ ನಂತರ ಸದರಿ ಶಾಲೆಯ ಜೇಷ್ಟತೆಯ ಆಧಾರದ ಮೇಲೆ ನಾನು ದಿಃ 30-10-2008 ರಂದು ಪ್ರಭಾರಿ ಮುಖ್ಯೋಪಾಧ್ಯಾಯನಾಗಿ ನೇಮಕಗೊಂಡಿದ್ದು, ಆಡಳಿತ ಮಂಡಳಿಯವರು ಪಂಚರ ಸಮಕ್ಷಮ ಶಾಲೆಯ ದಾಖಲಾತಿಗಳನ್ನು 2008 ರಲ್ಲಿ ಟ್ರೇಜರಿ ಕೀಯನ್ನು

ಸಿ.ಸಿ. ನಂಃ **430/2014**

ಸಿ.ಡಬ್ಲ್ಯೂ- 11
ಪಿ.ಡಬ್ಲ್ಯೂ- 9

ಮುರಿದು ಅಮಾನತ್ತುಪಡಿಸಿಕೊಂಡು ಸದರಿ ದಾಖಲಾತಿಗಳನ್ನು ಶಾಲಾ ಆಡಳಿತ ಮಂಡಳಿಯವರು ನನಗೆ ಹಸ್ತಾಂತರಿಸಿರುತ್ತಾರೆ. ಆ ಸಮಯದಲ್ಲಿ ನಮ್ಮ ಶಾಲೆಯಲ್ಲಿ FDA ಇಲ್ಲದೇ ಇರುವುದರಿಂದ ಚಾಸಾ 1 ರವರು ಸೂಚಿಸಿದ ವ್ಯಕ್ತಿಗೆ ಶಾಲಾ ದಾಖಲಾತಿಗಳನ್ನು ಪರಿಶೀಲಿಸಿ ಲೆಕ್ಕ ಪರಿಶೋಧನೆ ಮಾಡಿ ವರದಿ ಸಲ್ಲಿಸುವಂತೆ P M ಯಲಿಗಾರ ನಿವೃತ್ತ FDA ಇವರನ್ನು ನೇಮಿಸಿರುತ್ತೇವೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಎ ಪಿ ಪಿ ಯವರು ಸಮಯ ಕೋರಿದ್ದು ನ್ಯಾಯಯುತವಾದ ದೃಷ್ಟಿಯಿಂದ ಸಮಯ ನೀಡಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ ದಂ.,
ಮೂಡಲಗಿ.